ದಿನಾಂಕಃ 04-02-2021.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು 10ನೇ ತರಗತಿ ಓದಿದ್ದೇನೆ. ಈ ದಾವೆಯನ್ನು ಯಾರು, ಯಾರ ವಿರುದ್ಧ ಮತ್ತು ಯಾವ ಕಾರಣಕ್ಕಾಗಿ ಹಾಕಲಾಗಿದೆ ಎಂದರೆ, ಸಾಕ್ಷಿಯು ಮರಿಯಣ್ಣನವರ ಹೆಂಡತಿ ಅವರ ವಿರುದ್ಧ ಜೀವನಾಂಶಕ್ಕಾಗಿ ಈ ದಾವೆಯನ್ನು ಹೂಡಿದ್ದಾರೆ ಎನ್ನುತ್ತಾರೆ. ಪವನ್ ಕುಮಾರ್ ಮರಿಯಣ್ಣನವರ ಮಗ ಎಂದರೆ ಸಾಕ್ಷಿಯು ಮೊದಲು ಹೌದು ಎಂದು ನಂತರ ಗೊತ್ತಿಲ್ಲ ಎನ್ನುತ್ತಾರೆ. ಮರಿಯಣ್ಣನವರ ಕುಟುಂಬದ ವ್ಯವಹಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸಾಮಾನ್ಯವಾಗಿ ಅವರ ಮನೆಯ ವ್ಯವಹಾರಗಳು ಗೊತ್ತು, ಅವರು ಅಡಿಕೆ, ತೆಂಗು ವ್ಯವಹಾರ ಮಾಡುತ್ತಾರೆ ಮತ್ತು ವ್ಯವಸಾಯ ಮಾಡುತ್ತಾರೆ ಎನ್ನುತ್ತಾರೆ. ನಾನು ವ್ಯವಸಾಯ ಮತ್ತು ತೆಂಗಿನಕಾಯಿ, ಅಡಿಕೆ ವ್ಯವಹಾರವನ್ನು ಮಾಡುತ್ತೇನೆ. ವ್ಯವಹಾರ ಮಾಡಲು ನಾನು ಪರವಾನಗಿಯುನ್ನು ಪಡೆದಿಲ್ಲ. ಈರೇಗೌಡರವರು ವ್ಯವಹಾರ ಮಾಡಲು ಪರವಾನಗಿ ಪಡೆದಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಸರ್ವೇ ನಂ.52ರಲ್ಲಿ 2 ಎಕರೆ ಜಮೀನು ಇದೆ. ಸರ್ವೇ ನಂ.31ರಲ್ಲಿ 29 ಗುಂಟೆ ಜಮೀನು ಇರಬಹುದು. ಈರೇಗೌಡರ ಕುಟುಂಬದವರು ಮೊದಲಿನಿಂದಲೂ ವ್ಯವಸಾಯ ಮಾಡುತ್ತಾರೆ ಎಂದರೆ ಸಾಕ್ಷಿಯು ವ್ಯವಸಾಯವನ್ನು ಮಾಡುತ್ತಾರೆ ಮತ್ತು ವ್ಯವಹಾರವನ್ನು ಮಾಡುತ್ತಾರೆ ಎನ್ನುತ್ತಾರೆ. ವ್ಯವಹಾರದಿಂದ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಲಾಭ ಬಂತು ಎಂದು ನನಗೆ ಗೊತ್ತಿಲ್ಲ. ಈರೇಗೌಡರು ಈ ಜಮೀನುಗಳನ್ನು ಚಂದ್ರಪ್ಪನವರ ಮಗ ಅನಂತರಾಜುರವರಿಂದ ಖರೀದಿಸಿದ್ದಾರೆ, ಎಷ್ಟಕ್ಕೆ ಖರೀದಿಸಿದರು ಎಂದು ಗೊತ್ತಿಲ್ಲ, ಆದರೆ ಸ್ವಯಾರ್ಜಿತವಾಗಿ ಖರೀದಿಸಿದ್ದಾರೆ ಎನ್ನುತ್ತಾರೆ. ಈರೇಗೌಡರು ವ್ಯವಸಾಯವನ್ನು ಮಾಡುತ್ತಿದ್ದರು, ವ್ಯವಹಾರ ಮಾಡುತ್ತಿರಲಿಲ್ಲ, ವ್ಯವಸಾಯದಿಂದ ಬಂದ

ಹಣದಿಂದ ಈ ಜಮೀನುಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅವರು ವ್ಯವಹಾರವನ್ನು ಮಾಡುತ್ತಾರೆ ಎನ್ನುತ್ತಾರೆ. ಈರೇಗೌಡರು ಪುಟ್ಟರಂಗಮ್ಮನವರಿಗೆ ದಾನವನ್ನು ಯಾವ ವರ್ಷದಲ್ಲಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆದರೆ ಅರಿಶಿನ ಕುಂಕುಮಕ್ಕಾಗಿ ದಾನ ಕೊಟ್ಟಿದ್ದಾರೆ ಎನ್ನುತ್ತಾರೆ. ಈರೇಗೌಡರಿಗೆ ಪುಟ್ಟರಂಗಮ್ಮ ಒಬ್ಬರೇ ತಂಗಿ. ಈರೇಗೌಡರು ಪಾಲು ವಿಭಾಗ ಕೊಡಬೇಕಾಗುತ್ತದೆ ಎಂದು ಅವರ ತಂಗಿಯ ಹೆಸರಿಗೆ ಸುಳ್ಳು ದಾನಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ಈರೇಗೌಡರು ದಾನ ಮಾಡಿದ ವಿಷಯ ನನಗೆ ಹೇಗೆ ತಿಳಿಯಿತು ಎಂದರೆ ನನ್ನ ಮನೆ ಈರೇಗೌಡರ ಮನೆಯ ಮುಂದೆ ಇದೆ. ಅವರ ಅಣ್ಣ-ತಮ್ಮಂದಿರು ಸುಮಾರು 10 ವರ್ಷಗಳ ಹಿಂದೆ ಪುಟ್ಟರಂಗಮ್ಮನ ಹೆಸರಿಗೆ ದಾನಪತ್ರ ಮಾಡಿ ಕೊಟ್ಟಿದ್ದಾರೆ. ಪುಟ್ಟರಂಗಮ್ಮನವರು ಆ ಸ್ವತ್ತಿನ ಸ್ವಾಧೀನದಲ್ಲಿಲ್ಲ, ವಾದಿಗಳಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ದಾನಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರಿಯಣ್ಣನವರ ಹೆಂಡತಿ ಸಣ್ಣತಾಯಮ್ಮನವರು ಮತ್ತು ಅವರ ಮಗ ಪವನ್ ಕುಮಾರ್ ಗುಬ್ಬಿ ನ್ಯಾಯಾಲಯದಲ್ಲಿ ಸಿ.ಮಿಸ್.524/2011ರಂತೆ ಜೀವನಾಂಶಕ್ಕಾಗಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ದಾವೆ ಹೂಡಿದ ನಂತರ ಆಸ್ತಿಯಲ್ಲಿ ಭಾಗ ಕೇಳುತ್ತಾರೆಂದು ಸುಳ್ಳು ದಾನಪತ್ರ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

ಪುಟ್ಟರಂಗಮ್ಮನವರನ್ನು ಗೊಲ್ಲರಚಿಕ್ಕನಹಳ್ಳಿ, ಕಾಟನಾಯಕನಹಳ್ಳಿಗೆ ಕೊಟ್ಟು ಮದುವೆ ಮಾಡಲಾಗಿದೆ. ಪುಟ್ಟರಂಗಮ್ಮನವರು ಮತ್ತು ಅವರ ಯಜಮಾನರಿಗೆ ಕಾಟನಾಯಕನಹಳ್ಳಿಯಲ್ಲಿ ಸಾಕಷ್ಟು ಆಸ್ತಿ-ಪಾಸ್ತಿಗಳಿಗೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪುಟ್ಟರಂಗಮ್ಮನವರ ಯಜಮಾನರು ಮರಣ ಹೊಂದಿದ್ದಾರೆ, ಅವರಿಗೆ ತುಂಬಾ ಕಷ್ಟವಿದ್ದಾಗ ಈರೇಗೌಡರು ದಾನಪತ್ರವನ್ನು ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ನಾನು ಮತ್ತು ಈರೇಗೌಡರು ವಿಶ್ವಾಸದಿಂದ ಇದ್ದೇವೆ ಎಂದರೆ, ನಾವು ಒಂದೇ

ಊರಿನವರು ನಮ್ಮದು ಎದುರು-ಬದುರು ಮನೆ, ಆಗಾಗಿ ಅವರು ನನಗೆ ಗೊತ್ತು ಎನ್ನುತ್ತಾರೆ. ಈರೇಗೌಡರು ಅಡಿಕೆ , ತೆಂಗು ವ್ಯಾಪಾರ ಮಾಡುವುದಿಲ್ಲ, ನಾನು ಈರೇಗೌಡರೊಂದಿಗೆ ವಿಶ್ವಾಸದಿಂದ ಇದ್ದ ಕಾರಣಕ್ಕಾಗಿ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು, ಅವರು ಸವ್ವಯಾರ್ಜಿತವಾಗಿ ಖರೀದಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಈರೇಗೌಡರ ಹೆಂಡತಿ ನಿಂಗಜ್ಜಿರವರ ತವರು ಮನೆಯವರ ಸಹಾಯದಿಂದ ಈರೇಗೌಡರು ಆಸ್ತಿಯನ್ನು ಖರೀದಿಸಿದ್ದಾರೆ. ಈರೇಗೌಡರಿಗೆ ಯಾರು ಸಹಾಯ ಮಾಡದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.